ಓ.ಎಸ್. ನಂಃ **65/2015**
<u>ಪಿಡಬ್ಲ್ಯೂಃ **4**</u>

ದಿನಾಂಕಃ 22-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **12** ನೇ ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ವಕೀಲರಿಂದಃ</u>

ಈ ದಾವೆಯ ಆಸ್ತಿಗಳ ಸರ್ವೆ ನಂ.63/ಎ ಕ್ಷೇತ್ರ 02 ಎಕರೆ 18 ಗುಂಟೆ 63/ಆ ಕ್ಷೇತ್ರ 32 ಗುಂಟೆ ಇರುತ್ತದೆ. ಇವುಗಳಲ್ಲದೇ ಮನೆಗಳಿಗೆ ಸಂಬಂಧಿಸಿದಂತೆಯೂ ಸಹ ಈ ದಾವೆ ದಾಖಲಿಸಲಾಗಿದೆ. ಸದರಿ ಜಮಿನುಗಳು ಮೊದಲು ದುರ್ಗಪ್ಪ ರವರ ಹೆಸರಿನಲ್ಲಿ ಇದ್ದವು. ಯಾವ ವರ್ಷದಲ್ಲಿ ದುರ್ಗಪ್ಪನವರ ಹೆಸರಿನಲ್ಲಿ ಪಹಣಿ ಇದ್ದವು ಎಂದರೆ ಸಾಕ್ಷಿಯು 7-8 ವರ್ಷಗಳ ವರೆಗೆ ಆತನ ಹೆಸರಿನಲ್ಲಿ ಇದ್ದವು ಎಂದು ನುಡಿಯುತ್ತಾರೆ. ನಾನು ಆತನ ಹೆಸರಿನಲ್ಲಿ ಇರುವ ಪಹಣಿಗಳನ್ನು ನೋಡಿದ್ದೆನೆ. ನಮ್ಮ ಹಾಗೂ ದುರ್ಗಪ್ಪ ರವರ ಜಮೀನುಗಳು ಒಂದೇ ಪಹಣಿ ಪತ್ರಿಕೆಯಲ್ಲಿ ಇದ್ದವು, ಆದ್ದರಿಂದ ಅವರ ಹೆಸರಿನಲ್ಲಿ ಇರುವ ಪಹಣಿ ಪತ್ರಿಕೆಗಳನ್ನು ನಾನು ನೋಡಿದ್ದೆನು. ದಾವಾ ಜಮೀನುಗಳು 2 ನೆ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ಆ ನಂತರ ಆತನ ಹೆಸರಿಗೆ ಖಾತೆ ವರ್ಗಾವಣೆ ಅಗಿತ್ತು ಎಂದು ನುಡಿಯುತ್ತಾರೆ. ಸದರಿ 2 ನೇ ಪ್ರತಿವಾದಿಯ ಗಂಡ ಆತಪ್ಪ ಜೀವಂತವಿದ್ದಾಗ ಪಹಣಿ ಆತನ ಹೆಸರಿಲ್ಲಿ ಇದ್ದವು ಎಂದರೆ ಸರಿ. ಆಶಪ್ಪ ತೀರಿಕೊಂಡು ಈಗ 15 ವರ್ಷ ಮೇಲ್ಪಟ್ಟು ಆಗಿರಬಹುದು. ತನ್ನ ಜೀವಿತಾವದಿಯಲ್ಲಿ ಆಶಪ್ಪ ರವರೇ ದಾವಾ ಜಮೀನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಆಶಪ್ಪ ತೀರಿಕೊಂಡ ನಂತರ ಆತನ ಹೆಂಡತಿ 2 ನೇ ಪ್ರತಿವಾದಿ ಹೆಸರಿಗೆ ಜಮೀನು ಖಾತಾ ವರ್ಗಾವಣೆ ಆಗಿದ್ದವು ಎಂದರೆ ಸಾಕ್ಷಿಯು ವಾದಿ ಸಾಬಣ್ಣನಿಗೆ ಗೊತ್ತಿಲ್ಲದಂತೆ ವರ್ಗಾವಣೆ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. 14-15 ವರ್ಷಗಳ ಹಿಂದೆ 2 ನೇ ಪ್ರತಿವಾದಿಯ ಹೆಸರಿಗೆ ಖಾತಾ ವರ್ಗಾವಣೆ ಆಗಿತ್ತು ಎಂದರೆ ಸರಿ. 2 ನೇ ಪ್ರತಿವಾದಿಯೇ ದಾವಾ ಜಮೀನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ.

2. ನನಗೆ 12 ನೇ ಪ್ರತಿವಾದಿಯ ಪರಿಚಯ ಇದೆ. ನಾನು ಸಹ 12 ನೇ ಪ್ರತಿವಾದಿಗೆ 01 ಎಕರೆ 21 ಗುಂಟೆ ಜಮೀನು ಮಾರಾಟ ಮಾಡಿದ್ದೇನೆ. ಅದಕ್ಕೆ ಸಂಬಂಧಿಸಿದಂತೆ ನೊಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿದ್ದೇನೆಂದರೆ ಸರಿ. ಜಮೀನು ಮಾರಾಟ ಮಾಡಿದ ನಂತರ ಹೆಚ್ಚಿ ನ ಹಣ ನೀಡುವಂತೆ ನಾನು 12 ನೇ ಪ್ರತಿವಾದಿಗೆ ಕಿರಿ-ಕಿರಿ ಮಾಡಿದ್ದೆನು ಎಂದರೆ ಸರಿಯಲ್ಲ. ನಂತರ ನ್ಯಾಯ ಪಂಚಾಯಿತಿ ಆದಾಗ 12 ನೇ ಪ್ರತಿವಾದಿ ನಿಮಗೆ ರೂ.50 ಸಾವಿರ

ಹೆಚ್ಚಿನ ಮೊತ್ತ ನೀಡಿದ್ದಾರೆ ಎಂದರೆ ಸಾಕ್ಷಿಯು ರೂ.10 ಸಾವಿರ ಮಾತ್ರ ಹೆಚ್ಚಿನ ಹಣ ಪಾವತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈಗ 20 ವರ್ಷದ ಒಳಗೆ ನಾನು ಆತನಿಗೆ ಜಮೀನು ಮಾರಾಟ ಮಾಡಿರುತ್ತೇನೆ. ಆತನಿಂದ ಹೆಚ್ಚಿನ ಹಣ ಪಡೆದುಕೊಂಡಾಗಿನಿಂದ ನನ್ನ ಮತ್ತು 12 ನೇ ಪ್ರತಿವಾದಿಯ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ನೀವು ಪರಸ್ಪರರ ಮನೆಗೆ ಕಾರ್ಯಕ್ರಮಗಳಿಗೆ ಹೋಗುವುದಿಲ್ಲ ಎಂದರೆ ಸಾಕ್ಷಿಯು ನಾನು ಉಪ್ಪಾರು ಹಾಗೂ ಅವರು ಕುರುಬರು ಆಗಿರುವುದರಿಂದ ಕಾರ್ಯಮಗಳಿಗೆ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆತನಿಂದ ಹೆಚ್ಚಿನ ಹಣ ಪಡೆದುಕೊಂಡಿರುವುದರಿಂದ ನಾವುಗಳು ಪರಸ್ಪರ ನಮ್ಮ ಮನೆಗಳಿಗೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ದ್ವೇಶದಿಂದ ನಾನು 12 ನೇ ಪ್ರತಿವಾದಿಯ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ವಾದಿಯ ಕುಟುಂಬಕ್ಕೆ ಎರಡು ಸರ್ವೆ ನಂಬರುಗಳಲ್ಲಿ ಒಟ್ಟು 04 ಎಕರೆ ಜಮೀನು ಇರುತ್ತದೆ. ಗಣೇಶ ಎಂಬಾತ ವಾದಿಯ ಮಗ ಆಗಿರುತ್ತಾನೆ ಎಂದರೆ ಸರಿಯಲ್ಲ. ಗಾಜರಕೋಟ ಗ್ರಾಮದ ಸರ್ವೆ ನಂ.510 ರಲ್ಲಿ ವಾದಿಯ ಹೆಸರಿನಲ್ಲಿ 02 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ವಾದಿಗೆ ಹೇಗೆ ಬಂದಿದೆ ಎಂದರೆ ಸಾಕ್ಷಿಯು ಸರಕಾರದಿಂದ ಮಂಜೂರಾಗಿದೆ ಎಂದು ನುಡಿಯುತ್ತಾರೆ. ವಾದಿಗೆ ಒಟ್ಟು 05 ಜನ ಹೆಣ್ಣು ಹಾಗೂ 02 ಗಂಡು ಮಕ್ಕಳು ಇದ್ದರು, ಆ ಪೈಕಿ ಒಬ್ಬ ತೀರಿಕೊಂಡಿದ್ದಾನೆ. ವಾದಿಯ ಇನ್ನೊಬ್ಬ ಮಗನ ಹೆಸರು ನರಸಪ್ಪ ಇರುತ್ತದೆ ಎಂದರೆ ಸರಿ. ಸರ್ವೆ ನಂ.510 ರಲ್ಲಿ ಸದರಿ ನರಸಪ್ಪನ ಹೆಸರಿನಲ್ಲಿಯೂ ಸಹ 02 ಎಕರೆ ಜಮೀನು ಇದೆ ಎಂದರೆ ಸರಿ. 2 ನೇ ಪ್ರತಿವಾದಿ ವಾದಿಯ ಅಣ್ಣನ ಹೆಂಡತಿ ಆಗಿರುತ್ತಾಳೆ. ಸರ್ವೆ ನಂ.510 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಸಹ 02 ಎಕರೆ ಜಮೀನು ಇದೆ ಎಂದರೆ ಸರಿ. 6 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂ.407 ಹಾಗೂ 1038 ರಲ್ಲಿ ಒಟ್ಟು 06 ಎಕರೆ 21 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಸರಿ, ಅವರು ಸ್ವಂತ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಹಾಗೂ 1 ರಿಂದ 7 ನೇ ಪ್ರತಿವಾದಿಯರ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

4. 2 ನೇ ಪ್ರತಿವಾದಿ ದಾವಾ ಎರಡು ಜಮೀನುಗಳನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ 12 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬಂದಿರುತ್ತವೆ ಎಂದರೆ ಸರಿ. ಆ ಪ್ರಕಾರ 12 ನೇ ಪ್ರತಿವಾದಿಯೇ ದಾವಾ ಎರಡು ಜಮೀನುಗಳ ಮಾಲಿಕ ಮತ್ತು ಕಬ್ಜೆದಾರ ಆಗಿರುತ್ತಾನೆ ಎಂದರೆ ಸರಿ. ನಂತರ 12 ನೇ ಪ್ರತಿವಾದಿ ದಾವಾ ಅನುಸೂಚಿ 1 ರ 02 ಎಕರೆ 18 ಗುಂಟೆ ಜಮೀನನ್ನು 13 ನೇ ಪ್ರತಿವಾದಿಗೆ ಮಾರಾಟ

ಮಾಡಿರುತ್ತಾನೆ ಎಂದರೆ ಸರಿ. ಆ ಪ್ರಕಾರ 13 ನೇಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿದ್ದು ಆತ ಸದರಿ ಜಮೀನಿನ ಮಾಲೀಕ ಹಾಗೂ ಕಬ್ಜೆದಾರ ಆಗಿರುತ್ತಾನೆ ಎಂದರೆ ಸಾಕ್ಷಿಯು ಸರಿ, ಈ ದಾವೆ ದಾಖಲಾದ ನಂತರ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 12 ಮತ್ತು 13 ನೇ ಪ್ರತಿವಾದಿಯರು ದಾವಾ ಜಮೀನುಗಳ ಮಾಲೀಕರು ಹಾಗೂ ಕಬ್ಜೆದಾರರು ಆಗಿರುತ್ತಾರೆ ಎಂದರೆ ಸರಿ. ವಾದಿಗೂ ಹಾಗೂ ದಾವಾ ಜಮೀನುಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

5. ವಾದಿ ಆರೋಗ್ಯವಾಗಿದ್ದು ನ್ಯಾಯಾಲಯಕ್ಕೆ ಬಂದ ಸಾಕ್ಷ ನುಡಿಯಲು ಸಮರ್ಥರಾಗಿರುತ್ತಾರೆ ಎಂದರೆ ಸಾಕ್ಷಿಯು ರಸ್ತೆ ಅಪಘಾತದಲ್ಲಿ ಆತನ ಕಾಲು ಹೋಗಿದೆ ಎಂದು ನುಡಿಯುತ್ತಾರೆ. ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 12 ನೇ ಪ್ರತಿವಾದಿಯ ಮೇಲಿನ ದ್ವೇಶದಿಂದ ಆತನ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ರಿಂದ 7 ನೇ ಪ್ರತಿವಾದಿಯರು ಚಂದಪ್ಪನ ವಂಶಸ್ಥರಾಗಿರುತ್ತಾರೆ ಎಂದರೆ ಸರಿ. ವಾದಿಯು ಭೀಮಪ್ಪನ ವಂಶಸ್ಥನಾಗಿರುತ್ತಾನೆ ಎಂದರೆ ಸರಿ. ಚಂದಪ್ಪ ಹಾಗೂ ಭೀಮಪ್ಪ ತಮ್ಮ ಜೀವಿತಾವದಿಯಲ್ಲಿಯೇ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಸರಿ, ನಾವು ಆಗ ಇನ್ನು ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಭೀಮಪ್ಪನ ಪಾಲಿನ ಆಸ್ತಿಗಳನ್ನು ಆತನ ವಂಶಸ್ಥರು ಹಾಗೂ ಚಂದಪ್ಪನ ಪಾಲಿನ ಆಸ್ತಿಗಳನ್ನು ಆತನ ವಂಶಸ್ಥರು ಉಳುಮೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ **2** ರಿಂದ **4** ಹಾಗೂ **6** ನೇ ಪ್ರತಿವಾದಿಯ ಪರ ಶ್ರೀ ಎಂ ಎಂ ಕೆ ವಕೀಲರಿಂದಃ</u>

6. ನಾನು 9 ನೇ ತರಗತಿ ವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು-ಬರೆಯಲು ಬರುವುದಿಲ್ಲ. ನಿಮ್ಮ ಸಾಕ್ಷ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನನಗೆ ಇಂಗ್ಲೀಷ್ ಭಾಷೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ದುರ್ಗಪ್ಪ ರವರ ತಂದೆಯ ಹೆಸರು ಅಂದರೆ ವಾದಿಯ ಅಜ್ಜನ ಹೆಸರು ಭೀಮಪ್ಪ ಎಂದು ಇರುತ್ತದೆ. ಸದರಿ ಭೀಮಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಗಂಡನ ಆಶಣ್ಣ ರವರ ತಂದೆಯ ಹೆಸರು ಸಾಬಣ್ಣ ಎಂದು ಇರುತ್ತದೆ. ಸದರಿ ಸಾಬಣ್ಣ ರವರ ತಂದೆಯ ಹೆಸರು ಚಂದಪ್ಪ ಎಂದು ಇರುತ್ತದೆ. ಸದರಿ ಚಂದಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನಗೆ ಚಂದಪ್ಪ ಹಾಗೂ ಭೀಮಪ್ಪ ರವರ ಹೆಂಡತಿಯರ ಹೆಸರುಗಳು ಗೊತ್ತಿಲ್ಲ. ಚಂದಪ್ಪ ಹಾಗೂ ಭೀಮಪ್ಪನ ಕುಟುಬಂಗಳು ಬೇರೆ ಬೇರೆ ಇರುತ್ತವೆ ಎಂದರೆ ಸಾಕ್ಷಿಯು ನಾನು ಅವರನ್ನು

ನೋಡಿಲ್ಲ ಹಾಗೂ ಅವರ ಮಕ್ಕಳನ್ನು ಸಹ ನೋಡಿಲ್ಲ ಎಂದು ನುಡಿಯುತ್ತಾರೆ. ಭೀಮಪ್ಪ ರವರ ಪಾಲಿಗೆ ಎಷ್ಟು ಹೊಲಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಚಂದಪ್ಪ ರವರ ಪಾಲಿಗೆ ಎಷ್ಟು ಹೊಲಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯ ಮಾವ ಸಾಬಣ್ಣ ಹಾಗೂ ವಾದಿಯ ತಂದೆ ದುರ್ಗಪ್ಪ ರವರ ಜಮೀನುಗಳು ಬೇರೆ ಬೇರೆ ಇರುತ್ತವೆ ಎಂದರೆ ಸಾಕ್ಷಿಯು ಒಂದೇ ಕಡೆ ಇದ್ದಾವೆ ಎಂದು ನುಡಿಯುತ್ತಾರೆ. ವಾದಿ ಹಾಗೂ 1 ರಿಂದ 7 ನೇ ಪ್ರತಿವಾದಿಯರು ತಮ್ಮ ತಮ್ಮ ಜಮೀನುಗಳನ್ನು ಪ್ರತ್ಯೇಕ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಹಾಗೂ 1 ರಿಂದ 7 ನೇ ಪ್ರತಿವಾದಿಯರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಅವರ ಮನೆಗಳ ನಡುವೆ ಒಂದು ಗೋಡೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಆದರೆ ವಾದಿ ಹಾಗೂ 1 ರಿಂದ 7 ನೇ ಪ್ರತಿವಾದಿಯರ ಕುಟುಂಬದವರು ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಸದರಿಯವರು ಯಾವಾಗ ಬೇರೆಯಾಗಿದ್ದಾರೆ ಹಾಗೂ ಯಾವಾಗ ಪಾಲು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಹಾಗೂ 1 ರಿಂದ 7 ನೇ ಪ್ರತಿವಾದಿಯ ಕುಟುಂಬದವರು ಸುಮಾರು 20-30 ವರ್ಷಗಳಿಂದ ಬೇರೆ ಬೇರೆಯಾಗಿ ವಾಸವಾಗಿದ್ದಾರೆ ಎಂದರೆ ಸರಿ. ಅದೇ ರೀತಿ ಅವರುಗಳು ತಮ್ಮ ತಮ್ಮ ಜಮೀನುಗಳನ್ನು ಪ್ರತ್ಯೇಕ ಉಳುಮೆ ಮಾಡುತ್ತಾರೆ ಎಂದರೆ ಸಾಕ್ಷಿಯು ಸರಿ, ಆದರೆ ಆ ನಂತರ 2 ನೇ ಪ್ರತಿವಾದಿ 12 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿದ ಜಮೀನು 2 ರಿಂದ 7 ನೇ ಪ್ರತಿವಾದಿಯರ ಪಾಲಿಗೆ ಬಂದ ಜಮೀನಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

7. ವಾದಿಯು 1994 ರಲ್ಲಿ 2 ನೇ ಪ್ರತಿವಾದಿಯ ಗಂಡನಿಗೆ ಒಂದು ಜಮೀನು ಮಾರಾಟ ಮಾಡಿರುವ ವಿಷಯ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.998/ಅ ರಲ್ಲಿನ 32 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

8. ಲಕ್ಷ್ಮಪ್ಪ ಬೊಯಿನ್, ಹಣಮಂತ ಸುಂಕಾರ್, ನಾಗಪ್ಪ ಇಟ್ಕಲ್, ತಿಮ್ಮಪ್ಪ ಸುಂಕರ್, ಬಸಪ್ಪ ಕೋಟರಕಿ, ಭೀಮಶಪ್ಪ ಬೋಯಿನ್ ಹಾಗೂ ನರಸಪ್ಪ ಮೇಲಗೇರಿ ಎಂಬುವವರು ನಮ್ಮ ಗ್ರಾಮದವರು ಆಗಿರುತ್ತಾರೆ ಎಂದರೆ ಸರಿ. ವಾದಿ ಸದರಿಯವರ ಸಮಕ್ಷಮ ದಿಃ 25.07.1994 ರಂದು 2 ನೇ ಪ್ರತಿವಾದಿಯ ಗಂಡನಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಿನ ನನ್ನನ್ನು ವಾದಿ ಸಾಬಣ್ಣನ ಹೆಂಡತಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

( 8 ರಿಂದ 11 ನೇಪ್ರತಿವಾದಿಯರು ಹಾಗೂ ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ)

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ